
# ಚಿದಾನಂದಾವಧೂತರ 'ಜ್ಞಾನಸಿಂಧು'




**ಕೃತಿ:** ಜ್ಞಾನಸಿಂಧು
**ಲೇಖಕರು :** ಪ್ರೊ . ಮಲ್ಲೇಪುರಂ ಜಿ. ವೆಂಕಟೇಶ
**ಪ್ರಕಾಶನ :** ಉದಯ ಪ್ರಕಾಶನ
ನಂ. 984, 11ನೇ ಮುಖ್ಯರಸ್ತೆ , 3ನೇ ಹಂತ, ರಾಜಾಜಿನಗರ, ಬೆಂಗಳೂರು - 10
ಮೊ. 8762144241
**ಬೆಲೆ:** 800/- **ಪುಟ:** 776

ವೇದಾಂತ ತತ್ತ್ವವನ್ನೇ ಆಧಾರವಾಗಿಟ್ಟುಕೊಂಡು ಕಾವ್ಯಶೈಲಿಯಲ್ಲಿ ಕೃತಿ ರಚನೆ ಮಾಡಿದರೆ ಅದು ಹೇಗಿರುತ್ತದೆ? ಇದಕ್ಕೆ ಉತ್ತಮ ಉದಾಹರಣೆಯೇ ಕನ್ನಡ ವೇದಾಂತ ಕಾವ್ಯವೆನಿಸಿಕೊಂಡಿರುವ, ಚಿದಾನಂದ ಅವಧೂತರ ಕೃತಿ **'ಜ್ಞಾನಸಿಂಧು.'** ಈ ಬೃಹತ್ ಗ್ರಂಥವು ಭಾಮಿನಿ ಷಟ್ಪದಿಯಲ್ಲಿ ರಚಿತವಾದ, ೪೯ ಪ್ರಕರಣಗಳಷ್ಟು ವಿಸ್ತಾರವಾದ, ಅದ್ವೈತ ವೇದಾಂತ ಹಾಗೂ ಯೋಗ ವಿಚಾರಗಳನ್ನು ಒಳಗೊಂಡ ಒಂದು ಅಪೂರ್ವ ಗ್ರಂಥವಾಗಿದೆ. ಸ್ವತಃ ಆಧ್ಯಾತ್ಮಿಕ ಸಾಧಕರಾಗಿದ್ದು, ಸಿದ್ಧ ಗುರುವಿನ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದ್ದ ಚಿದಾನಂದ ಅವಧೂತರ ಕಾವ್ಯದಲ್ಲಿ ಮೂಡಿ ಬಂದಿರುವ ವಿಚಾರಗಳಿಗೆ ಅನುಭವದ ಹಿನ್ನೆಲೆಯಿದೆ. ಜೊತೆಗೆ, ಕನ್ನಡ ಭಾಷೆಯ ಆಡುನುಡಿಯ ಹಾಗೂ ನುಡಿಗಟ್ಟುಗಳ ಸೊಗಡು ತಾತ್ತ್ವಿಕ ಪರಿಭಾಷೆಯೊಂದಿಗೆ ಸುಮಧುರವಾಗಿ ಮಿಳಿತವಾಗಿದೆ. ಈ ಕೃತಿಯನ್ನು ಸಮಗ್ರವಾಗಿ ಸಂಪಾದಿಸಿ, ಮೂಲ ಕವಿಯ ಜೀವನ, ಕೃತಿಗಳು, ಹಿನ್ನೆಲೆ, ಇಲ್ಲಿನ ತತ್ತ್ವವಿಚಾರ ಮುಂತಾದ ವಿವರಗಳೊಂದಿಗೆ ಪ್ರಕಟಿಸಿದವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿದ್ದ 'ಶಾಸ್ತ್ರಚೂಡಾಮಣಿ' ಪ್ರೊ . ಮಲ್ಲೇಪುರಂ ಜಿ. ವೆಂಕಟೇಶ ಅವರು.

ಈ ಕೃತಿಯ ವಿಷಯ ಮತ್ತು ವಿಶೇಷತೆಗಳ ಬಗ್ಗೆ ಸಂಪಾದಕರು ತಮ್ಮ ಮುನ್ನುಡಿ 'ತೋರಣ ನಾಂದಿ'ಯಲ್ಲಿ ಹೀಗೆ ತಿಳಿಸಿಕೊಡುತ್ತಾರೆ:

'' 'ಜ್ಞಾನಸಿಂಧು' ಯೋಗಮಾರ್ಗಾವಲಂಬಿಯಾದ ವಿವಿಧ ಬಗೆಯ ಸಾಧನಾ ಕ್ರಮವನ್ನು ಪ್ರತಿಪಾದಿಸುತ್ತದೆ; ಅದ್ವೈತ ಸಿದ್ಧಿಯ ಕಡೆಗೆ ಇದು ಬೆರಳುಮಾಡಿ ತೋರಿಸುತ್ತದೆ. ಇದರ ಕರ್ತೃ ಚಿದಾನಂದಾವಧೂತರು ತಮ್ಮ ಪೂರ್ವದ ಹಲವಾರು ವೇದಾಂತ ಗ್ರಂಥಗಳ ಅಧ್ಯಯನದಿಂದ ಹಾಗೂ ತಮ್ಮ ಸ್ವಾನುಭವದಿಂದ ಮುಮುಕ್ಷುಗಳಿಗೆ ಆತ್ಮಜ್ಞಾನವನ್ನು ನೀಡುವ ಉದ್ದೇಶದಿಂದ ವಿವರ ವಿವರವಾಗಿ ಸಾಧನಾ ಕ್ರಮದ ಹಲವಾರು ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದ್ದಾರೆ. 'ಜ್ಞಾನಸಿಂಧು' ಹೆಸರಿಗೆ ತಕ್ಕಂತೆ ಜ್ಞಾನದ ಸಮುದ್ರವೇ ಆಗಿದೆ!'' (ಪು.xii)

ಕುಮಾರವ್ಯಾಸನೇ ಮೊದಲಾದ ಪ್ರಾಚೀನ ಕವಿಗಳ ನೆರಳಿನಲ್ಲಿ ಪದ್ಯರಚನೆ ಮಾಡಿದ್ದರೂ, ಕವಿತ್ವಕ್ಕಿಂತ ತತ್ತ್ವನಿರೂಪಣೆಯೇ ಇಲ್ಲಿ ಮುಖ್ಯವಾದ್ದರಿಂದ, ಇದನ್ನು ಕಾವ್ಯವೆನ್ನುವುದಕ್ಕಿಂತ, ವೇದಾಂತ ಗ್ರಂಥ ಅಥವಾ ತಾತ್ತ್ವಿಕ ಗ್ರಂಥವೆಂದೇ ಕರೆಯುವುದು ಸೂಕ್ತ. ಆದರೂ, 'ತೋರಣ ನಾಂದಿ' ಯಲ್ಲಿ ಈ ಕುರಿತು ಹೀಗೆ ಹೇಳಲಾಗಿದೆ: ''ಅಮೂರ್ತ ವಿಷಯವನ್ನು ಭಾಷೆಯಲ್ಲಿ ಅದೂ ಕಾವ್ಯ ಭಾಷೆಯಲ್ಲಿ ಪ್ರಕಟಗೊಳಿಸುವುದು ತುಂಬ ಕಠಿಣವಾದ ಕಾರ್ಯವೇ ಸರಿ. ಈ ಕಾರ್ಯದಲ್ಲಿ ಚಿದಾನಂದಾವಧೂರತು ಬಹುಮಟ್ಟಿಗೆ ಯಶಸ್ವಿಯಾಗಿದ್ದರೂ ಅಲ್ಲಿಗಲ್ಲಿಗೆ ಕಾವ್ಯದ ಲಯ ಭಾಷೆಯ ಬಂಧಗಳಲ್ಲಿ ಶೈಥಿಲ್ಯ ಕಂಡುಬರುತ್ತದೆ.. ಶಿಷ್ಟ ಭಾಷೆಯನ್ನು ಧಾರಾಳವಾಗಿ ಬಳಸಿಕೊಳ್ಳುವ ಚಿದಾನಂದಾವಧೂತರು ಗ್ರಾಮ್ಯ ಭಾಷೆಯನ್ನೂ ವೆಗ್ಗಳವಾಗಿ ಬಳಸಿಕೊಂಡಿದ್ದಾರೆ.. ಜನಪದ ಭಾಷೆ, ನುಡಿಗಟ್ಟುಗಳನ್ನು ಅರ್ಥಪೂರ್ಣವಾಗಿ ಬಳಸಿಕೊಂಡ ಇವರ ಅನುಭವ ಸಂಪತ್ತೂ ಅಪಾರವಾಗಿಯೇ ನಮಗೆ ಕಾಣುತ್ತದೆ.'' (ಪು. xxvii).

ಈ ಕೃತಿಯ ಸಂಪಾದನೆ ಮಾಡುವಾಗ ಸಂಪಾದಕರು ವಹಿಸಿದ ಶ್ರಮ, ಪ್ರಯತ್ನ ಹಾಗೂ ಶಿಸ್ತುಬದ್ಧತೆಯನ್ನು 'ಸಂಪಾದಕನ ಮಾತು' ಎಂಬ ಆರಂಭದ ಪುಟಗಳಲ್ಲಿ ಕಾಣಬಹುದು. ಜೊತೆಗೆ, ಮೂಲ ಕವಿಯ ಜೀವನ ವಿವರಗಳು, ಇನ್ನಿತರ ಮಾಹಿತಿಗಳನ್ನು ತಮ್ಮ ಮುನ್ನುಡಿ 'ತೋರಣ ನಾಂದಿ'ಯಲ್ಲೂ, ಪರಿಶಿಷ್ಟವಾಗಿ ಬಂದಿರುವ 'ಹಿನ್ನುಡಿ'ಯಲ್ಲೂ (ಶ್ರೀ ಜಿ.ಎನ್. ಕೆಂಚಪ್ಪ ಅವರು ಬರೆದುದು) ನೀಡಲಾಗಿದೆ. ಸಾಮಾನ್ಯ ಓದುಗರಿಗೆ ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಅಗತ್ಯ ಕಂಡುಬಂದಲ್ಲಿ ಪದ್ಯಗಳ ಕೆಳಗೆ ವಿವರಣೆಯನ್ನೂ ನೀಡಲಾಗಿದೆ. ಒಂದು ತಾತ್ತ್ವಿಕ ಗ್ರಂಥವು ಜನಸಾಮಾನ್ಯರನ್ನು ತಲುಪಲಿ, ಹಾಗೂ ಅವರ ಜೀವನದಲ್ಲಿ ಅದರ ಸಾರವು ಪ್ರವೇಶಿಸಲಿ ಎಂಬ ಕಾಳಜಿ ಇಲ್ಲಿ ವಿಶೇಷವಾಗಿ ಎದ್ದು ಕಾಣುತ್ತಿದೆ. ಸುಂದರ ಮುದ್ರಣ, ಗುಣಮಟ್ಟದ ಕ್ಯಾಲಿಕೋ ರಕ್ಷಾಪುಟದೊಂದಿಗೆ ಪ್ರಕಟವಾದ ಈ ಸಂಗ್ರಹಯೋಗ್ಯ ಗ್ರಂಥವು ಕೇವಲ ಗ್ರಂಥಾಲಯಗಳನ್ನು ಮಾತ್ರ ಅಲಂಕರಿಸಿದರೆ ಸಾಲದು; ಆಧ್ಯಾತ್ಮಿಕ ಒಲವುಳ್ಳ ಜನರ ಬಾಳಿಗೆ ಸಹಾಯಕವಾಗಬೇಕು. ಇದರಿಂದ ಚಿದಾನಂದಾವಧೂತರ ಕೃತಿರಚನೆ ಸಾರ್ಥಕವಾಗುವುದು. ✸